## ಮಿರಾಕಲ್ ಗ್ರೋ

ನಿಮಗೆ ತೋಟಗಾರಿಕೆಯಲ್ಲಿ ಇಷ್ಟವಿದ್ದರೆ ಈ ಆ್ಯಪ್ ಬಳಸಿ ಸಲಹೆಗಳನ್ನು ಪಡೆಯಬಹುದು. ಈ ಐಒಎಸ್ ಆ್ಯಪ್ ನೀವಿರುವ ಸ್ಥಳದ ವಿವರ ಕೇಳುತ್ತದೆ. ನಂತರ ನಿಮಗೆ ಅನುಕೂಲವಾದ ಕೈತೋಟದ ಯೋಜನಾ ವಿವರ ಪಡೆಯಬಹುದು. ಹವಾಮಾನದ ಆಧಾರದ ಮೇಲೆ ಯಾವ ರೀತಿಯ ಹೂಗಿಡಗಳು ಹಾಗೂ ಇತರ ಅಲಂಕಾರಿಕ ಗಿಡಗಳನ್ನು ಬೆಳೆಯಬಹುದು ಎಂದು ಅದು ಸಲಹೆ ನೀಡುತ್ತದೆ. ಒಮ್ಮೆ ಈ ಆ್ಯಪ್ ಅಳವಡಿಸಿಕೊಂಡರೆ ಸಾಕು, ಅದು ಕೈತೋಟ ಬೆಳೆಸುವ ಎಲ್ಲಾ ಜವಾಬ್ದಾರಿ ಹೊರುತ್ತದೆ.






## ಸ್ಮಾರ್ಟ್‌ಫೋನ್‌ನಲ್ಲಿ ಸುಧಾರಿತ ಗೂಗಲ್ ಸರ್ಚ್

ಈ ಸುಧಾರಿತ ಹುಡುಕಾಟ ಇನ್ ಆ್ಯಪ್ಸ್ ನಿಂದ ಬಳಕೆದಾರರು ತಮ್ಮ ಫೋನ್‌ನಲ್ಲಿ ಅಳವಡಿಸಲ್ಪಟ್ಟ ಆ್ಯಪ್‌ಗಳಿಂದ ವಿಷಯವನ್ನು ಶೀಘ್ರವಾಗಿ ಹುಡುಕಿಕೊಳ್ಳಬಹುದು. ಇದಕ್ಕಾಗಿ ನಿಮ್ಮ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಗೂಗ್ಲ್ ಆ್ಯಪ್‌ಗೆ ಹೋಗಿ ಇನ್ ಆ್ಯಪ್ಸ್ ಟ್ಯಾಬ್ ಹುಡುಕಿಕೊಳ್ಳಿ. ಈ ಬಹು ವಿಸ್ತ್ರತವಾದ ಸಂಯೋಜನೆಯಿಂದ ಇತರ ಆ್ಯಪ್‌ಗಳಿಂದ ಮಾಡಿದಂತಹ ಕಾರ್ಯಗಳನ್ನು ಹುಡುಕಾಡಬಹುದು. ಉದಾಹರಣೆಗೆ ನೀವು ಮೀಟಿಂಗ್ ಬಗ್ಗೆ ಸಂಬಂಧಪಟ್ಟವರ ಜೊತೆ ಚ್ಯಾಟಿಂಗ್ ಮಾಡಿದ್ದನ್ನು ಹುಡುಕಬೇಕಾದರೆ ಮೀಟಿಂಗ್ ಶಬ್ದವನ್ನು ಸರ್ಚ್ ಬಾರ್‌ನಲ್ಲಿ ಹಾಕಿ. ಮೆಸ್ಸೇಜಿಂಗ್ ಆ್ಯಪ್‌ನಲ್ಲಿ ಇದು ನಿಮಗೆ ತಕ್ಷಣ ಸಿಗುತ್ತದೆ. ಹಾಗೆಯೇ ಬಳಕೆದಾರರು ತಮ್ಮ ಕಾಂಟ್ಯಾಕ್ಟ್ಸ್ ಅನ್ನು ಬಹಳ ಸುಲಭವಾಗಿ ಹುಡುಕಿ ಸರ್ಚ್ ಸ್ಕ್ರೀನ್‌ನಿಂದಲೇ ನೇರವಾಗಿ ಟೆಕ್ಸ್ಟ್ ಕಳಿಸಬಹುದು.

## ಅಡೋಬ್ ಫೋಟೊಶಾಪ್ ಎಕ್ಸ್‌ಪ್ರೆಸ್

ಐಫೋನ್‌ನ ಈ ಆ್ಯಪ್ ಅನ್ನು ಅಪ್‌ಗ್ರೇಡ್ ಮಾಡಿಕೊಂಡರೆ ಚಿತ್ರದ ಎಡಿಟಿಂಗ್ ಕುರಿತು ಹೊಸ ರೀತಿಯ ಅನುಭವ ಪಡೆಯಬಹುದು. ಸ್ನಾಪ್‌ಸೀಡ್‌ನಲ್ಲಿ ಎಡಿಟ್ ಮಾಡುವ ಹಲವು ಸೌಲಭ್ಯಗಳನ್ನು ಈ ಮೂಲಕ ಪಡೆದು ಇನ್‌ಸ್ಟಾಗ್ರಾಂ ಹಾಗೂ ಕ್ಯಾಮೆರಾ ಪ್ಲಸ್‌ನಲ್ಲಿ ಅದ್ಭುತ ಪರಿಣಾಮಗಳನ್ನು ಮೂಡಿಸಬಹುದು. ಸ್ಪಷ್ಟವಾದ ಮೇಲ್ಮೈ ಇದ್ದು ಚಿತ್ರದ ಹೊಂದಾಣಿಕೆಗೆ ಉತ್ತಮವಾದ ನಿಯಂತ್ರಣಗಳನ್ನು ಸಾಧಿಸಬಹುದು. ಆನ್‌ಲೈನ್ ಗ್ಯಾಲರಿಗೆ ಸಂಯೋಜನೆ ಮಾಡಬಹುದು. ಸಂಪೂರ್ಣವಾಗಿ ಕಾರ್ಯನಿರ್ವಹಿಸಲು ಕ್ರಿಯೇಟಿವ್ ಕ್ಲೌಡ್ ಖಾತೆಯ ಅಗತ್ಯವಿದೆ. ಐಟ್ಯೂನ್ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಡ್ರಾಪ್ ಬಾಕ್ಸ್ ಅಥವಾ ಫೇಸ್‌ಬುಕ್ ಫೋಟೋಗಳನ್ನು ಆಯ್ಕೆ ಮಾಡಿಕೊಂಡು ಎಡಿಟ್ ಮಾಡಬಹುದು.






Hound

## ಹೌಂಡ್

ಇದು ನಿಮ್ಮ ಫೋನ್‌ನ ವೈಯಕ್ತಿಕ ಸಹಾಯಕನಂತೆ ವರ್ತಿಸುತ್ತದೆ. ಸಿರಿ ಹಾಗೂ ಗೂಗಲ್ ಈಗಾಗಲೇ ಆ್ಯಪಲ್ ಹಾಗೂ ಆ್ಯಂಡ್ರಾಯ್ಡ್ ಫೋನ್ ಬಳಕೆದಾರರಿಗೆ ಪರಿಚಿತವಾಗಿದ್ದು, ಇಂತಹ ಕೆಲಸಗಳನ್ನು ಹೌಂಡ್ ಇನ್ನಷ್ಟು ಉತ್ತಮವಾಗಿ ಮಾಡಬಲ್ಲದು. ಉದಾಹರಣೆಗೆ ನಿಮಗೆ ಇನ್ನು 10– 12 ವರ್ಷಗಳ ನಂತರದ ದಿನಾಂಕ ಯಾವ ವಾರ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಪ್ರಶ್ನೆಯನ್ನು ಕೇಳಬಹುದು. ಹೌಂಡ್ ಪ್ರತಿಯೊಂದು ಶಬ್ದಗಳನ್ನು ಅರ್ಥ ಮಾಡಿಕೊಂಡು ಉತ್ತರವನ್ನು ನೀಡುತ್ತದೆ. ಮಾತನ್ನು ಗುರುತಿಸುವ ತಂತ್ರಜ್ಞಾನವನ್ನು ಇಲ್ಲಿ ಅಳವಡಿಸಲಾಗಿದೆ. ಇದನ್ನು ಸದ್ಯ ಕೆಲವು ಟ್ಯಾಕ್ಸಿಗಳಲ್ಲೂ ಅಳವಡಿಸಲಾಗಿದ್ದು, ಬಾಡಿಗೆ, ಪಯಣಿಸಬೇಕಾದ ದೂರ ಹಾಗೂ ಸಮಯವನ್ನು ಹೇಳುತ್ತದೆ.

■ ಎಸ್.ತುಂಬೆ